


ಎಡದಿಂದ ಬಲಕ್ಕೆ:

1. ಸದಾ ಶಾಂತವಾಗಿರಲು ಕಾರಣ ಆತನೀಗ ನಿವೃತ್ತ 3
3. ಬಿದಿರನ್ನು ಕಡಿದು ಕಡಿದು ಈಗ ಎಲ್ಲವೂ ಖಾಲಿ 3
4. ಬರಗಾಲವನ್ನು ಕಲ್ಪಿಸಿಕೊಂಡರೇ ಭಾರೀ ಆತಂಕ, ಹೆದರಿಕೆ 3
6. ಯತಿವರ್ಯನ ಸಮ್ಮುಖದಲ್ಲಿ ಎಲ್ಲ ಬೆಲೆಗಳಲ್ಲೂ ಕಡಿತ 4
7. ಮೋಜುಗಾರರ ಜೊತೆ ಓಡಾಡಲು ಸಂಕೋಚ, ಇರುಸುಮುರುಸು 4
9. ಇದು ಸಾಧು ಸ್ವಭಾವದ ಹಾವುಗಳದೇ ಒಂದು ಬಗೆ 4
11. ಸಾವಿತ್ರಿಯಂತೆಯೇ ಈಕೆಯೂ ಸುಳ್ಳು ಹೇಳುವವಳಲ್ಲ 4
15. ಆ ತುತ್ತೂರಿಯ ಸದ್ದು ಕೇಳಿದರೇ ಏಕೋ ಭಯ, ನಡುಕ 3
16. ಕೊಡಬೇಕಾದ ರುಸುಮಿನ ಅಂದಾಜು ಹಿಂದುಮುಂದು 3
17. ಬರಿಗೈಯಲ್ಲಿ ಬಂದಿದ್ದಾನೆಂದರೆ ಬಡವನೇ ತಾನೇ? 3

ಮೇಲಿಂದ ಕೆಳಕ್ಕೆ:

1. ವಾರಿಧಿಯ ಸ್ವಾಸ್ಥ್ಯಕ್ಕೆ ಎಲ್ಲೆಲ್ಲೂ ಪ್ರತಿಕೂಲ 3
2. ಅಲ್ಲಿ ತಂಗಿದ್ದಕ್ಕೆ ಹಣ ನೀಡಬೇಕೆಂದು ಒತ್ತಾಯ 3
3. ಬಂಡಿ ಎಳೆವ ಸಾಮರ್ಥ್ಯ ಕುರಿತು ಭಾರೀ ಜಂಬದ ಮಾತು 3
5. ರಾಜ್ಯವನ್ನಾಳುವ ಕ್ರಮದಲ್ಲೂ ಉಂಟೇ ಸಂಪ್ರದಾಯ? 3
6. ಶೋಧಿಸುವ ಕೆಲಸದ ಯಶಸ್ಸಿನ ಬಗೆಗೆ ತುಂಬ ನಂಬಿಕೆ 3
8. ಮಾತುಗಳನ್ನೇ ಮರೆಸಿಬಿಡುವಂತಹ ಸೌಂದರ್ಯ, ಸೊಬಗು 3
10. ನಿಜವಾದ ವಿದ್ಯಾವಂತ ; ಅದಕ್ಕೇ ಹೀಗೆ ಸೌಜನ್ಯಶೀಲ 3
12. ತಾಜಾ ವಸ್ತುಗಳನ್ನು ಸ್ವೀಕರಿಸು; ಉಳಿದೆಲ್ಲವನ್ನೂ ತೊರೆದುಬಿಡು 3
13. ಗೌರವ ತೋರುವುದು ಒಳ್ಳೆಯದು , ಅದೊಂದು ಉಗ್ರ ಸರೀಸೃಪ! 3
14. ಆಸೆಬುರುಕರ ನಡುವೆ ಯಾರೀ ಮುಗ್ಧ ಕುರಿ ಕಾಯುವವ? 3

---

## 4-7-2019 ಉತ್ತರಗಳು

ಎಡದಿಂದ ಬಲಕ್ಕೆ:

1. ಉಷಃಕಾಲ 3. ಪ್ರತಾಪ 4. ಕ್ಷಮತೆ 6. ಸಹವಾಸ 7. ನವರಸ 9. ನರೋತ್ತಮ 12. ರಣಹದ್ದು 14. ಕರಾಚಿ 15. ಮಣಿಸು 16. ಕೆಕ್ಕರಿಸು

ಮೇಲಿಂದ ಕೆಳಕ್ಕೆ:

1. ಉಪವಾಸ 2. ಲಕ್ಷಜನ 3. ಪ್ರವಾಹ 5. ತೆಪರ 6. ಸತ್ವಹೀನ 8. ಸರಹದ್ದು 10. ರೋಚಕ 11. ಮರೀಚಿಕೆ 12. ರಘುಮಸು (=ಸುಮಧುರ ತಲೆಕೆಳಗು) 13. ಹರಸು

ಪ್ರಶ್ನಾ ಂಕಣ

# ಮ್ಯಾಟರ್ ಹಾರ್ನ್ ಏಕೆ ವಿಖ್ಯಾತ?

ಮ್ಯಾಟರ್ ಹಾರ್ನ್. ಅದೊಂದು ಪರ್ವತ ಶಿಖರ. ಯೂರೋಪ್ ಖಂಡದ ಆಲ್ಪ್ಸ್ ಪರ್ವತ ಪಂಕ್ತಿಯ ಅತ್ಯಂತ ವಿಶಿಷ್ಟ, ಅತ್ಯಂತ ಪ್ರಸಿದ್ಧ ಶಿಖರ ಅದು (ಚಿತ್ರ 1). 4478 ಮೀಟರ್ (14692 ಅಡಿ) ಎತ್ತರ ಇರುವ ಮ್ಯಾಟರ್ ಹಾರ್ನ್ ಉನ್ನತಿಯಲ್ಲಿ ಯಾವ ಅದ್ಭುತ ದಾಖಲೆಯನ್ನೂ ಪಡೆದಿಲ್ಲ. ವಾಸ್ತವವಾಗಿ ಅದಕ್ಕಿಂತ ಎತ್ತರದ ಐದು ಶಿಖರಗಳು (ಕ್ರಮವಾಗಿ ಮಾಂಟ್ ಬ್ಲಾಂಕ್, ಮಾಂಟೆ ರೋಸಾ, ಡಾಮ್, ಲಿಸ್ಕ್ ಮನ್ ಮತ್ತು ವೀಸ್ ಹಾರ್ನ್) ಆಲ್ಪ್ಸ್‌ನಲ್ಲೇ ಇವೆ. ಆದರೂ ಅದರ ನೆಲೆ, ಅದರ ಆಕಾರ ಮತ್ತು ಇತರ ಅನನ್ಯ ಲಕ್ಷಣಗಳಿಂದ ಮ್ಯಾಟರ್ ಹಾರ್ನ್ ವಿಶ್ವ ವಿಖ್ಯಾತ. ಅದರ ಆಕರ್ಷಣೆ ಎಷ್ಟಿದೆಯೆಂದರೆ ಪ್ರತಿ ವರ್ಷ ಈ ಶಿಖರವನ್ನು ನೋಡಹೋಗುವ ಪ್ರವಾಸಿಗರ ಸಂಖ್ಯೆ ಮೂವತ್ತು ಲಕ್ಷದಷ್ಟಿದೆ!

ಹಿಮಾಚ್ಛಾದಿತವಾದ ಹೇರಳ ಶಿಖರಗಳನ್ನೂ, ಅದ್ಭುತ ಹಿಮನದಿಗಳನ್ನೂ (ಚಿತ್ರ 2, 3) ಧರಿಸಿರುವ ಆಲ್ಪ್ಸ್ ಪರ್ವತ ಪಂಕ್ತಿಯಲ್ಲಿ ಮ್ಯಾಟರ್ ಹಾರ್ನ್ ಪ್ರತ್ಯೇಕವಾಗಿ, ಏಕಾಂಗಿಯಾಗಿ ತಲೆ ಎತ್ತಿ ನಿಂತಿದೆ. ಮ್ಯಾಟರ್ ಹಾರ್ನ್‌ನ ಪರಮ ವೈಶಿಷ್ಟ್ಯ ಅದರ ಆಕಾರ. ಅದರದು ನೆಲದಿಂದ ಮೇಲೆದ್ದ ನಾಲ್ಕು ಮುಖಗಳ ಗೋಪುರದ (ಪಿರಮಿಡ್‌ನ) ಆಕಾರ. ವಿಸ್ಮಯ ಏನೆಂದರೆ, ಈ ಬೃಹತ್ ನೈಸರ್ಗಿಕ ಬಂಡೆ ಪಿರಮಿಡ್‌ನ ನಾಲ್ಕೂ ಇಳಿಜಾರು ಅಂಚುಗಳು ದಿಕ್ಸೂಚಿಯಂತೆ ನಾಲ್ಕು ಪ್ರಧಾನ ದಿಕ್ಕುಗಳಿಗೆ, ಎಂದರೆ ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಗೆ ಅಭಿಮುಖವಾಗಿವೆ! ಮ್ಯಾಟರ್ ಹಾರ್ನ್‌ನ ನಾಲ್ಕೂ ಮುಖಗಳದು ತುಂಬ ಕಡಿಮೆ ಇಳಿಜಾರು. ಹಾಗಾಗಿ ಅವುಗಳದು ಹಿಮ ಸಂಚಯವಿಲ್ಲದ ಬೋಳು ಬಂಡೆ ಗೋಡೆಗಳಂತಹ ಸ್ವರೂಪ. ಈ ಶಿಖರದ ದಕ್ಷಿಣದ ಮುಖ ಮಾತ್ರ ಇಟಲಿಯ ಕಡೆಗೂ ಉಳಿದ ಮೂರೂ ಶಿಖರಗಳು ಸ್ವಿಟ್ಜರ್‌ಲ್ಯಾಂಡ್‌ನ ಕಡೆಗೂ ಇವೆ!




ಮ್ಯಾಟರ್ ಹಾರ್ನ್ ಮೈದಳೆಯಲಾರಂಭಿಸಿದ್ದು ಈಗ್ಗೆ ಸುಮಾರು 200 ದಶಲಕ್ಷವರ್ಷ ಹಿಂದೆ. ಆ ಕಾಲದಲ್ಲಿ ಎರಡು ಭಾರೀ ಭೂ ಫಲಕಗಳು ಅಭಿಮುಖವಾಗಿ ಡಿಕ್ಕಿ ಹಾಕಿದ್ದರ ಫಲವಾಗಿ ಆಲ್ಪ್ಸ್ ಪರ್ವತ ಪಂಕ್ತಿ ಮತ್ತು ಅದರ ಎಲ್ಲ ಶಿಖರಗಳು ಮೈದಳೆದಂತೆಯೇ ಮ್ಯಾಟರ್ ಹಾರ್ನ್ ಕೂಡ ಅವತರಿಸಿತು. ಮೂಲತಃ ಇಳಿಜಾರು ಮೇಲ್ಮೈನ ಒಂದು ಬೃಹತ್ ಬೆಟ್ಟದಂತೆ ತಲೆಯೆತ್ತಿದ ಈ ಶಿಖರ ನಿರಂತರ ಶಿಥಿಲೀಕರಣದಿಂದ ಸವೆದು ಸವೆದು ಈಗ್ಗೆ ಸುಮಾರು ಒಂದು ದಶಲಕ್ಷ ವರ್ಷ ಹಿಂದೆ ಈಗಿನ ಕಡಿದಾದ ಚತುರ್ಮುಖ ಗೋಪುರ ರೂಪವನ್ನು ಪಡೆಯಿತು.

ಮ್ಯಾಟರ್ ಹಾರ್ನ್ ಪ್ರಥಮವಾಗಿ ಗುರುತಿಸಲ್ಪಟ್ಟಿದ್ದು ಇಸವಿ 1865 ರಲ್ಲಿ. ಆ ವರ್ಷದ ಜುಲೈ 14ರಂದು ಬ್ರಿಟಿಷ್ ಅನ್ವೇಷಕ 'ಎಡ್ವರ್ಡ್ ವೈಂಪರ್' ಮತ್ತವರ ತಂಡ ಮ್ಯಾಟರ್ ಹಾರ್ನ್ ಅನ್ನು ಮೊತ್ತಮೊದಲಿಗೆ ಯಶಸ್ವಿಯಾಗಿ ಆರೋಹಿಸಿತು. ಮ್ಯಾಟರ್ ಹಾರ್ನ್ ಅನ್ನು ಮೆಟ್ಟಿದ ಮೊದಲ ಮಹಿಳೆ 'ಲ್ಯೂಸಿ ವಾಕರ್'; ಆ ಸಾಧನೆಯ ದಿನ ಜುಲೈ 22., 1871. ಪ್ರಸ್ತುತ ಪ್ರತಿ ವರ್ಷ ಸುಮಾರು 3000 ಜನ ಸಾಹಸಿಗಳು ಮ್ಯಾಟರ್ ಹಾರ್ನ್ ಅನ್ನು ಆರೋಹಿಸುತ್ತಾರೆ; ಪ್ರತಿ ವರ್ಷ ಮೂರು ನಾಲ್ಕು ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಕೂಡ.

■ ಎನ್. ವಾಸುದೇವ್